ಪಿ.ಡಬ್ಲ್ಯು2

(ಇಂದು ದಿನಾಂಕ 15-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

1 ನೇ ವಾದಿಯು ನನ್ನ ತಾಯಿಯ ಅಣ್ಣನ ಹೆಂಡತಿ. 2 ಮತ್ತು 3 ನೇ ವಾದಿಯವರು ನನ್ನ ಮಾವನಾಗಿರುತ್ತಾರೆ. ವಾದಿಯವರ ಮನೆ ನನ್ನ ಅಜ್ಜಿಯ ಮನೆ ಎಂದರೆ ಸರಿ. ನಾನು ಮೂಲತಃ ಕೂಜಳ್ಳಿ ಯವನಾಗಿದ್ದು, ಸುಮಾರು 50 ವರ್ಷಗಳಿಂದ ಕಲವೆಯಲ್ಲಿ ಖಾಯಂ ವಾಸ್ತವ್ಯ ಮಾಡಿಕೊಂಡು ಬಂದಿರುತ್ತೇನೆ. ಕುಮಟಾದಿಂದ ಕಲವೆಗೆ 20 ಕಿ.ಮೀ. ಅಂತರ ಇರುತ್ತದೆ. ನಾನು ಸಂತೆಗುಳಿಯ ಪಶು ಆಸ್ಪತ್ರೆಯಲ್ಲಿ ಹೊರಗುತ್ತಿಗೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ. ವಾದಿಯವರ ಮನೆಯು ಕುಮಟಾ ಗ್ರಾಮದ ಸ.ನಂ. 482 ಹಿಸ್ಸಾ 2ಬ 2ಕ 2ಡ2 ರಲ್ಲಿ ಇರುತ್ತದೆ. ಪ್ರತಿವಾದಿಯವರ ಮನೆಯು ಕುಮಟಾ ಗ್ರಾಮದ ಸ.ನಂ. 482 ಹಿಸ್ಸಾ 2ಡ 2ಇ1 ರಲ್ಲಿ ಇರುತ್ತದೆ. ಪ್ರತಿವಾದಿಯವರ ಕ್ಷೇತ್ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಯವರ ಸ.ನಂ. ನಲ್ಲಿ ಒಟ್ಟು 3 ಮನೆಗಳು ಇರುತ್ತದೆ. ವಾದಿಯವರ ಸ.ನಂ. ನಲ್ಲಿ ಒಟ್ಟು 2 ಮನೆಗಳು ಇರುತ್ತದೆ. ವಾದಿಯವರ ಸ.ನಂ. ನಲ್ಲಿರುವ ಮನೆಯಲ್ಲಿ 2 ನೇ ವಾದಿಯವರ ಮನೆ ಹಾಗೂ ಶೇಖರ ವಾಮನ ನಾಯ್ಕ ರವರ ಮನೆ ಇರುತ್ತದೆ. ಶೇಖರ ವಾಮನ ನಾಯ್ಕ ಹಾಗೂ ವಾದಿಯವರಿಗೆ ದೊಡ್ಡಪ್ಪ ಚಿಕ್ಕಪ್ಪನ ಸಂಬಂಧ ಇರುತ್ತದೆ. ನಾನು ಅಜ್ಜಿಯ ಮನೆಗೆ ತಿಂಗಳಿಗೆ 1-2 ಸಲ ಹೋಗಿ ಬಂದು ಮಾಡುತ್ತೇನೆ. ವಾದಿಯವರ ಮನೆಗೆ ಸಂಪರ್ಕಿಸುವ ಕಾಲು ದಾರಿಯು ಕುಮಟಾ ಗ್ರಾಮದ ಸ.ನಂ. 482 ಹಿಸ್ಸಾ 2ಡ 2ಇ1 ರಿಂದ ಪ್ರಾರಂಭವಾಗಿ ಪಶ್ಚಿಮದಿಂದ ಪೂರ್ವ ಅಭಿ ಮುಖವಾಗಿ ಸ.ನಂ. 482 ಹಿಸ್ಸಾ 2ಬ 2ಕ 2ಡ2 ಕ್ಕೆ ಮುಗಿಯುತ್ತದೆ. ಸದರಿ ಕಾಲು ದಾರಿಯು ಎಷ್ಟು ಉದ್ದ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ 2 ನೇ ವಾದಿಯವರು ಮಾಹಿತಿಯನ್ನು ನೀಡಿರುತ್ತಾರೆ. ನನ್ನ ಪ್ರಮಾಣ ಪತ್ರ ಸಲ್ಲಿಸಿದ ದಿನಾಂಕದಿಂದ ಇಲ್ಲಿಯ ವರೆಗೆ ನಾನು ನ್ಯಾಯಾಲಯಕ್ಕೆ

ಬಂದಾಗಿನಿಂದ 2 ನೇ ವಾದಿಯು ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತಾರೆ. ಇನ್ನೊಬ್ಬ ಸಾಕ್ಷಿದಾರರಾದ ಪಿ ಡಬ್ಲ್ಯೂ 3 ರವರಾದ ಶಿವರಾಮ ನಾಗಪ್ಪ ನಾಯ್ಕ ರವರು ನನ್ನ ದೂರದ ಸಂಬಂಧಿ ಹಾಗೂ ವಾದಿಯವರಿಗೆ ಹತ್ತಿರದ ಸಂಬಂಧಿಯಾಗಿರುತ್ತಾರೆ. ನಾನು ನನ್ನ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆ ಹಾಗೂ ಸರ್ವೇ ನಕಾಶೆಯನ್ನು ಪರಿಶೀಲಿಸಿದ್ದು ಇರುವುದಿಲ್ಲ. 2 ನೇ ವಾದಿಯು ವಕೀಲರಿಗೆ ನೀಡಿದ ಮಾಹಿತಿಯ ಪ್ರಕಾರ ವಾದಿಯ ವಕೀಲರು ತಯಾರಿಸಿದ ಪ್ರಮಾಣ ಪತ್ರವನ್ನು ನಾನು ತಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ಕುಮಟಾ ಗ್ರಾಮದ ಸ.ನಂ. 482 ಹಿಸ್ಸಾ 2ಡ1 ರಲ್ಲಿ 3 ಗುಂಟೆ 4 ಆಣೆ ಸ್ಥಳ ಪಿ ಡಬ್ಲ್ಯೂ 3 ಶಿವರಾಮ ನಾಯ್ಕ ರವರ ವೈವಾಟಿನಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲ. ಸದ್ರಿ ಪಿ ಡಬ್ಲ್ಯೂ 3 ಶಿವರಾಮ ನಾಯ್ಕ ರವರ ವೈವಾಟಿನಲ್ಲಿದ್ದ 3 ಗುಂಟೆ 4 ಆಣೆ ಸ್ಥಳದಲ್ಲಿ ವಾದಿಯವರಿಗೆ ಓಡಾಡಲು ಹಿಂದಿನಿಂದಲೂ ಕಾಲು ದಾರಿ ಇತ್ತು ಎಂದರೆ ಗೊತ್ತಿಲ್ಲ. ಪಿ ಡಬ್ಲ್ಯೂ 3 ಶಿವರಾಮ ನಾಯ್ಕ ರವರು ಅವರ ವೈವಾಟಿನ ಜಾಗದ ಸುತ್ತಲು ಪಾಗಾರವನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರು ಯಾವ ವರ್ಷದಲ್ಲಿ ಹಾಗೂ ಯಾವ ಸ.ನಂ. ನಲ್ಲಿ ಮನೆ ಕಟ್ಟಲು ಪ್ರಾರಂಭಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯವರು ಯಾವ ವರ್ಷದಲ್ಲಿ ಮನೆ ಕಟ್ಟಲು ಪ್ರಾರಂಭಿಸಿರುತ್ತಾರೆ ಎಂದು ನಾನು ನನ್ನ ಪ್ರಮಾಣ ಪತ್ರ ತಯಾರಿಸುವಾಗ ವಕೀಲರಿಗೆ ನಾನು ಮಾಹಿತಿಯನ್ನು ನೀಡಿದ್ದು ಇರುವುದಿಲ್ಲ.

ಪ್ರತಿವಾದಿಯವರ ಜಾಗದಲ್ಲಿ ವಾದಿಯವರಿಗೆ ಓಡಾಡಲು ಯಾವುದೇ ಕಾಲು ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾಸ್ತಿಯಲ್ಲಿ ಕಾಲು ದಾರಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ 2 ನೇ ವಾದಿಯವರು ನನ್ನ ಮಾವನವರು ಆಗಿರುವುದರಿಂದ ಅವರಿಗೆ ಸಹಾಯ ವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಾದಿಯವರಿಗೆ ಪ್ರತಿವಾದಿಯವರ ಜಾಗದಲ್ಲಿ ಓಡಾಡಲು ಯಾವುದೇ ಕಾಲುದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯವರು ಓಡಾಡುವ ಕಾಲು ದಾರಿಗೆ ಪ್ರತಿವಾದಿಯವರು ಯಾವುದೇ ತೊಂದರೆಯನ್ನು ನೀಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕಾಲು ದಾರಿಗೆ ಅಡ್ಡಲಾಗಿ ಕಟ್ಟೆಯನ್ನು

ಕಟ್ಟಿರುವುದಾಗಿ ನುಡಿಯುತ್ತಾರೆ. ವಾದಿಯವರು ಈಗ ಪ್ರತಿವಾದಿಯವರು ಕಟ್ಟಿದ ಕಟ್ಟೆಯ ಪಕ್ಕದಲ್ಲಿ ಇರುವ ಸ್ವಲ್ಪ ಜಾಗದಲ್ಲಿ ಓಡಾಡುತ್ತಾರೆ. 2 ಮತ್ತು 3 ನೇ ವಾದಿಯವರು ತಮ್ಮ ದ್ವಿಚಕ್ರ ವಾಹನದಲ್ಲಿ ಅವರ ಮನೆಯ ತನಕ ಓಡಾಡುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಓಡಾಡಲು ಅನಾನುಕೂಲವಾಗುತ್ತದೆ ಎಂದು ನುಡಿಯುತ್ತಾರೆ. ವಾದಿಯವರು ತಮ್ಮ ದ್ವಿಚಕ್ರ ವಾಹನದಲ್ಲಿ ಅವರ ಮನೆಗೆ ಹೋಗಿ ಬರುವಾಗ ದಾರಿಯಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿದ್ದು ಇರುವುದಿಲ್ಲ ಎಂದರೆ ಸರಿ. ನನಗೆ ದಾವಾಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ಜಡ್ಜ, ಕುಮಟಾ